ತಿಳಿಸಲಾಗುತ್ತಿತ್ತು. ಮಗು ಗಂಡು ಎಂದು ತಿಳಿದ ಮೇಲೆ 'ಅಭಿ' ಎಂದು ಹೆಸರಿಡೋಣ ಎಂದು ನರಹರಿ ಮತ್ತು ಶಾಲ್ಮಲಿ ನಿರ್ಧರಿಸಿದರು. ಹೆರಿಗೆಯಾದ ನಂತರ ಆ ಹೆಸರನ್ನು ಆಸ್ಪತ್ರೆಯಲ್ಲಿ ದಾಖಲಿಸಿ ಬರ್ತ್ ಸರ್ಟಿಫಿಕೇಟು ಪಡೆದರು. ಎರಡು ವರ್ಷದ ನಂತರ ಶಾಲ್ಮಲಿ ಹೆಣ್ಣು ಮಗುವನ್ನು ಹೆತ್ತಳು. ಹೆಣ್ಣು ಮಗುವಿಗೆ ಸುಕೃತಿ ಎಂದು ಹೆಸರಿರಿಸಿದರು. ಆಗಲೂ ಹೆರಿಗೆಗೆ ಬಂದ ಶಾಲ್ಮಲಿಯ ತಾಯಿ ತಂದೆ ಅವರ ಜೊತೆ ಎರಡು ತಿಂಗಳು ಅಮೆರಿಕೆಯಲ್ಲಿದ್ದರು.

6

ನರಹರಿಯ ನೆರೆಮನೆಯಲ್ಲೇ ವಾಸವಾಗಿದ್ದ ಮುರಲಿ ಎಂಬ ತರುಣ ಮತ್ತು ಅವನ ಹೆಂಡತಿ ಸನ್ಮತಿ ಒಂದು ದಿನ ನರಹರಿಯ ಮನೆಗೆ ಬಂದು ಮಾತಾಡಿ ತಮ್ಮನ್ನು ಪರಿಚಯಿಸಿಕೊಂಡರು. ಇಬ್ಬರೂ ಚೆನ್ನಾಗಿ ಕನ್ನಡ ಮಾತಾಡುತ್ತಿದ್ದರು. ತಾವಿಬ್ಬರೂ ಹುಟ್ಟಿದ್ದು ದಾವಣಗೆರೆಯಲ್ಲಿ. ಕಾಲೇಜು ಓದು ಹಾಸ್ಟೆಲಿನಲ್ಲಿದ್ದುಕೊಂಡು ಬೆಂಗಳೂರಿನಲ್ಲಿ.

ಯಾವ ಪ್ರಶ್ನೆಯನ್ನೂ ಕೇಳದ ನರಹರಿಯೊಡನೆ ಮುರಲಿ, 'ನಾನು ಒಂದು ಕಂಪ್ಯೂಟರ್ ಹಾರ್ಡ್‌ವೇರ್ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದೇನೆ' ಎಂದು ಹೇಳಿದ. ಕ್ರಮೇಣ, ಸನ್ಮತಿ ಮತ್ತು ಶಾಲ್ಮಲಿಯ ನಡುವೆ ಅನ್ಯೋನ್ಯತೆ ಬೆಳೆದು ಪರಿಚಯ ಸ್ನೇಹವಾಯಿತು. ಸನ್ಮತಿ ಅಕ್ಕ ಅಕ್ಕ ಎಂದು ಕರೆಯುತ್ತಾ ಶಾಲ್ಮಲಿಯನ್ನು ಬಹಳ ಹಚ್ಚಿಕೊಂಡಳು. ಸುಕೃತಿಯನ್ನು ಹೆತ್ತ ನಂತರ ಆಗಾಗ ಮೈಕೈ ನೋವು ಮತ್ತು ಜ್ವರಕ್ಕೆ ತುತ್ತಾಗುತ್ತಿದ್ದ ಶಾಲ್ಮಲಿಯನ್ನು ಸನ್ಮತಿ ಆಗಾಗ ಬಂದು ಬಹಳ ಅಚ್ಚೆಯಿಂದ ಮಾತಾಡಿಸುತ್ತಿದ್ದಳು. ಶುಶ್ರೂಷೆ ಮಾಡುತ್ತಿದ್ದಳು. ಅವಳ ನಡೆ ನುಡಿಯನ್ನು ಶಾಲ್ಮಲಿ ಕೂಡ ಬಹಳ ಮೆಚ್ಚಿಕೊಂಡಳು. ಗಂಡ ಮುರಲಿ ಒಳ್ಳೆಯ ಸಂಪಾನೆಯ ಉದ್ಯೋಗದಲ್ಲಿದ್ದಾನೆ, ಸನ್ಮತಿ ಐದು ವರ್ಷ ಮುಂಬಯಿಯಲ್ಲಿ ಒಂದು ಹೈಸ್ಕೂಲಿನಲ್ಲಿ ಇಂಗ್ಲಿಷ್ ಶಿಕ್ಷಕಿ ಆಗಿದ್ದಳು ಎಂಬ ವಿಚಾರ ಅವಳ ಮಾತಿನಿಂದಲೇ ಶಾಲ್ಮಲಿಗೆ ತಿಳಿಯಿತು. 'ಮದುವೆಯಾದ ತಿಂಗಳಲ್ಲೇ ಅಮೆರಿಕೆಗೆ ಬಂದೆವು. ಸುಲಭದಲ್ಲಿ ಒಳ್ಳೆಯ ನೌಕರಿ ಸಿಗಬಹುದಿತ್ತು. ಆದರೆ ಮುರಲಿ, ನನ್ನೊಬ್ಬನ ಸಂಪಾದನೆ ಸಾಕು, ನೀನು ಕೂಡ ಕೆಲಸ ಮಾಡಬೇಕಾಗಿಲ್ಲ ಎಂದ' ಎಂದಳು ಸನ್ಮತಿ. ಗಂಡನ ಬಗ್ಗೆ ಮಾತಾಡುವಾಗ ಸನ್ಮತಿ 'ಅವನು' ಎಂದು ಹೇಳುತ್ತಿದ್ದಳು. ಗಂಡನ ಬಳಿ ಮಾತಾಡುವಾಗ 'ನೀವು' ಎನ್ನುತ್ತಿದ್ದಳು. ಆ ಬಗ್ಗೆ ಯಾರಾದರೂ ಕೇಳಿದಾಗ ಸನ್ಮತಿ, 'ಏಕವಚನ ಪ್ರೀತಿ, ಗೌರವ ಮತ್ತು ಆತ್ಮೀಯತೆಯನ್ನು ಸೂಚಿಸುತ್ತದೆ. ನೋಡಿ, ಎಲ್ಲಾ ಗಂಡು ಹೆಣ್ಣು ದೇವರುಗಳಿಗೂ ನಾವು ಏಕವಚನವನ್ನೇ ಬಳಸುತ್ತೇವೆ. 'ಪತಿಯೇ ಪರದೈವ' ಎಂಬ ಮಾತು ಕೂಡ ಅದನ್ನೇ ಸೂಚಿಸುತ್ತದೆ ಅಲ್ವಾ?' ಬಹುವಚನದಲ್ಲಿ ಏನೂ ಇಲ್ಲ, ಅದು ಬರೀ ಒಂದು ಶಬ್ದ, ವ್ಯಕ್ತಿಯನ್ನು ಗುರುತಿಸುವ ಶಬ್ದ, ಅಷ್ಟೆ ಅಲ್ವಾ?' ಎನ್ನುತ್ತಿದ್ದಳು. ಅವಳ ಯಾವ ಮಾತಿಗೂ ಶಾಲ್ಮಲಿ ಮರುಮಾತು ಆಡುತ್ತಿರಲಿಲ್ಲ. ತಾಯಿ ತಂದೆಯನ್ನು ಕಳೆದುಕೊಂಡ ನರಹರಿ ಮೌನಿಯೇ ಆಗಿಬಿಟ್ಟಿದ್ದ. ಆ ದುಃಖದಲ್ಲಿ ಭಾಗಿಯಾಗಿದ್ದ ಶಾಲ್ಮಲಿ ಕೂಡ ಮೌನಿಯೇ ಆಗಿದ್ದಳು. ಅವಳ ಮೌನಕ್ಕೆ ಆಗಾಗ ಕಾಡುವ ಅಸೌಖ್ಯ ಕೂಡ ಕಾರಣವಾಗಿತ್ತು.

ಗಂಡ ನರಹರಿ ಮನೆಯಲ್ಲಿಲ್ಲದಾಗ ಬಂದು ಶಾಲ್ಮಲಿಯ ಆರೈಕೆ ಮಾಡುತ್ತಿದ್ದ ಸನ್ಮತಿ ಶಾಲ್ಮಲಿಯ ಪ್ರೀತಿಯ ಸಹೋದರಿಯೇ ಆಗಿಬಿಟ್ಟಳು. ಅಂಗಡಿಗೆ ಹೋದರೆ ತಾನು ಏನು ಹಣ್ಣು ಹಂಪಲು ತಿಂಡಿ ತಿನಸು ಕೊಂಡುಕೊಳ್ಳುತ್ತಿದ್ದಳೊ ಅದನ್ನೇ ಅಭಿ ಮತ್ತು ಸುಕೃತಿಗೂ ತರುತ್ತಿದ್ದಳು. ಕೆಲವೊಮ್ಮೆ ನರಹರಿ ಮನೆಯಲ್ಲಿರುವಾಗ ಸನ್ಮತಿಯ ಗಂಡ ಮುರಲಿ ಬರುತ್ತಿದ್ದ. ಸ್ವಲ್ಪ ಹೊತ್ತು ಇದ್ದು ಸುಖ ದುಃಖ ವಿಚಾರಿಸಿ ಮಾತಾಡಿ ಹೋಗುತ್ತಿದ್ದ. ಕಂಪ್ಯೂಟರ್ ಹಾರ್ಡ್‌ವೇರ್ ಕಂಪೆನಿಯಲ್ಲಿ ಇಂಜಿನಿಯರ್ ಆಗಿ ಕೆಲಸದಲ್ಲಿದ್ದ ಆತ ನರಹರಿಯ ಜೊತೆ ಅನ್ಯೋನ್ಯವಾಗಿದ್ದ. ಆದರೆ ಅವನ ಮಾತಿನ ರೀತಿಯಲ್ಲಿ ಒಂದು ಬಗೆ ಕೀಳರಿಮೆ ಆಗಾಗ ವ್ಯಕ್ತವಾಗುತ್ತಿತ್ತು. ಅದಕ್ಕೆ ಕಾರಣ ನರಹರಿ ತನಗಿಂತ ಹಲವು ಪಾಲು ಹೆಚ್ಚು ಸಂಬಳದ ಪ್ರತಿಷ್ಠಿತ ಹುದ್ದೆಯಲ್ಲಿರುವುದೇ ಆಗಿತ್ತು.

ಚಿಕ್ಕ ಹುಡುಗಿಯಾಗಿರುವಾಗಲೇ ಚಿನಕುರುಳಿ ಎಂದು ಕರೆಸಿಕೊಳ್ಳುತ್ತಿದ್ದ ಸನ್ಮತಿ ಸತ್ಯ ಮತ್ತು ಸುಳ್ಳನ್ನು ಬೆರೆಸಿ ಪಟಪಟನೆ ಮಾತಾಡುತ್ತಿದ್ದಳು. 'ಅಬ್ಬಾ ಇವಳ ನಾಲಿಗೆಯೆ' ಎಂದು ಉದ್ಗರಿಸದವರಿರಲಿಲ್ಲ. ಕಾಲೇಜು ಓದುತ್ತಿದ್ದ ಕಾಲದಲ್ಲಿ ಬಹಳ ಚಲೋದಾಗಿ ಮಾತಾಡುವ ಕಲೆಯನ್ನು ಕರಗತ ಮಾಡಿಕೊಂಡಿದ್ದ ಸನ್ಮತಿಯನ್ನು ಅವಳ ಸಹಪಾಠಿಗಳು, 'ಚಾಟರ್‌ಬಾಕ್ಸ್ ಆಫ್ ದ ಸೆಂಚುರಿ' ಎಂದು ಹೇಳುತ್ತಿದ್ದರು. ಎಲ್ಲರೂ ಹಾಗೆ ಹೇಳುತ್ತಿದ್ದರು ಎಂದು ಶಾಲ್ಮಲಿಗೂ ಹೇಳಿದಳು ಸನ್ಮತಿ. ಹಾಗೆ ಹೇಳಿದ್ದನ್ನು ಪ್ರಶಸ್ತಿಯೆಂಬಂತೆ ಸ್ವೀಕರಿಸುತ್ತಿದ್ದ ಸನ್ಮತಿ ಕಲ್ಲು ಕೂಡ ನಂಬುವಷ್ಟು ಚೆನ್ನಾಗಿ ಕಟ್ಟುಕತೆ ಹೆಣೆಯುವ ನೈಪುಣ್ಯದ ಗನಿಯಾಗಿದ್ದಳು. ಅವಳು ಹೇಳುತ್ತಿದ್ದುದರಲ್ಲಿ ಯಾವುದು ಸತ್ಯ ಯಾವುದು ಸುಳ್ಳು ಎಂದು ಕಂಡುಹಿಡಿಯುವುದು ಸುಲಭವಾಗಿರಲಿಲ್ಲ. ಮಾತಿನಲ್ಲಿ ಚತುರೆ ಮಾತ್ರವಲ್ಲ, ಸನ್ಮತಿ ಬಹಳ ರೂಪವತಿಯಾಗಿದ್ದಳು. ನೋಡಿದವರಿಗೆ ಇನ್ನೂ ನೋಡಬೇಕೆನಿಸುವ ಮಾಟವಾದ ಅಂಗಸೌಷ್ಟವ, ಮೋಡಿ ಮಾಡುವ ಮುಗುಳುನಗೆ, ಆಕರ್ಷಕವಾದ ಸ್ವರ್ಣಾಭರಣಗಳು ಮತ್ತು ಅಷ್ಟೇ ಆಕರ್ಷಕವಾದ ಉಡುಪಿನಲ್ಲಿ ಸನ್ಮತಿ ಬಹಳ ಮೋಹಕವಾಗಿ ಕಾಣಿಸುತ್ತಿದ್ದಳು.

ಸನ್ಮತಿ ತನ್ನ ಬದುಕಿನ ವಿವರಗಳನ್ನು ಹೇಳಿದಳು, 'ನಾನು ಬ್ರಾಹ್ಮಣರವಳು. ಬಿಎ ಮಾಡಿ ಬಿಎಡ್ ಮಾಡ್ತಿದ್ದೆ. ಬಿಎಡ್ ಓದ್ತಿರುವಾಗ ಮುರಲಿಯ ಪರಿಚಯವಾಯಿತು. 'ಎತ್ತಣ ಕೋಗಿಲೆ ಎತ್ತಣ ಮಾಮರ' ಅಂತ ನಿಮಗನಿಸಬಹುದು. ನಾನು ತುಂಬಾ ಓದ್ತಿದ್ದೆ. ಲೈಬ್ರರಿಗೆ ಹೋಗ್ತಿದ್ದೆ. ಮುರಲಿಗೂ ಓದುವ ಹವ್ಯಾಸವಿತ್ತು. ಹಾಗೆ ನಮಗೆ ಪರಿಚಯವಾದದ್ದು ಲೈಬ್ರರಿಯಲ್ಲಿ. ನನಗಾಗಿ ಪುಸ್ತಕಗಳನ್ನು ಕೊಂಡು ತರುತ್ತಿದ್ದ. ಅವನು ಕಂಪ್ಯೂಟರ್ ಹಾರ್ಡ್‌ವೇರ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮ ಮಾಡಿದ್ದ. ಓದಿದ್ದು ಅಥವಾ ಮಾಡಿದ್ದು ಅಷ್ಟೇ ಆದರೂ ಬಹಳ ಬುದ್ಧಿವಂತನಾಗಿದ್ದ. ಕಂಪ್ಯೂಟರ್ ಸಾಫ್ಟ್‌ವೇರ್ ಬಳಕೆಯಲ್ಲಿ ತನಗಿರುವಷ್ಟು ಜ್ಞಾನ ಇರುವವರು ಯಾರೂ ಇಲ್ಲ ಎಂಬಂತೆ ಮಾತಾಡುತ್ತಿದ್ದ. ಅದು ಸತ್ಯವೂ ಆಗಿತ್ತು. ಅದರ ಜೊತೆಗೆ ಕಂಪ್ಯೂಟರ್ ಹಾರ್ಡ್‌ವೇರ್‌ನಲ್ಲಿ ಪರಿಣತಿ ಸಂಪಾದಿಸಿದ್ದ. ನಾನು ಬಿಎಡ್ ಮುಗಿಸಿ ಒಂದು ಹೈಸ್ಕೂಲಿನಲ್ಲಿ ಶಿಕ್ಷಕಿಯಾದೆ. ಮುರಲಿ ದಲಿತರವನಾಗಿದ್ದ. 26ನೇ ವರ್ಷ ಪ್ರಾಯದಲ್ಲಿ ನನ್ನ ಮತ್ತು ಮುರಲಿಯ ಮದುವೆಯಾಯಿತು. ಒಂದು ಮಠದ ಸ್ವಾಮೀಜಿ ಮದುವೆಯ ವಿಧಿ ನೆರವೇರಿಸಿದರು. ಮುರಲಿ ನನಗಿಂತ ಎಂಟು ವರ್ಷಕ್ಕೆ ದೊಡ್ಡವನು. ಮುರಲಿಯ ಜೊತೆ ನನ್ನ ಮದುವೆಯಾದ ನಂತರ ನನ್ನ ತಾಯಿ ತಂದೆ ನನ್ನನ್ನು ದೂರ ಇಟ್ಟರು. ಆಮೇಲೆ ನಾನು ಅವರನ್ನು ಕಂಡಿಲ್ಲ. ಅವರು ನನ್ನನ್ನು ಕಂಡಿಲ್ಲ. ನಾನು ಬೆಳ್ಳಗಿರುವೆನೆಂದು ನನಗೆ ಅಹಂಕಾರ ಎಂದು ಮುರಲಿ ಹೇಳತೊಡಗಿದ. ಅವನು ಹೀಗೆ ನಡೆದುಕೊಳ್ಳುತ್ತಾ ಇದ್ದರೆ ಇದು ಎಲ್ಲಿಗೆ ಹೋಗಿ ಮುಟ್ಟುವುದು ಎಂಬ ಆತಂಕ ಈಗಲೂ ನನ್ನನ್ನು ಕಾಡುತ್ತಿದೆ. ಮಕ್ಕಳಾಗದ್ದಕ್ಕೆ ನನ್ನನ್ನು 'ಬಂಜೆ' ಎಂದು ಹಳಿಯತೊಡಗಿದ. 'ನನಗೆ ಅದರಲ್ಲಿ ಆಸಕ್ತಿಯಿಲ್ಲ' ಎಂದು ಅವನೇ ಹೇಳುತ್ತಿದ್ದ. ಹಾಗೆಂದರೇನು ಅಂತ ನೀವೇ ಊಹಿಸಬಹುದು. 'ಹಾಗಾದರೆ ಮಕ್ಕಳಾಗುವುದು ಹೇಗೆ?' ಎಂದು ಹೇಳಿ ಗಳಗಳನೆ ಅಳತೊಡಗಿದಳು. ಅವಳನ್ನು ಸಮಾಧಾನಪಡಿಸುವುದೇ ಕಷ್ಟವಾಯಿತು ಶಾಲ್ಮಲಿಗೆ. ಸ್ವಲ್ಪ ಹೊತ್ತಿನ ನಂತರ ಮನಸ್ಸು ಗಟ್ಟಿ ಮಾಡಿಕೊಂಡು ಸನ್ಮತಿ ಹೇಳಿದಳು, 'ಮದುವೆಯಾದ ನಂತರ ಒಂದೇ ಒಂದು ಸಲ ಅಪ್ಪ ಅಮ್ಮನನ್ನು ಕಾಣಬೇಕೆಂದು ಹೋಗಿದ್ದೆ. ನಾನು ಅಂಗಳಕ್ಕೆ ಮುಟ್ಟುವಷ್ಟರಲ್ಲಿ ಅಮ್ಮ ಬಾಗಿಲು ಹಾಕಿಕೊಂಡಳು. ಬೆಳಿಗ್ಗೆ ಹೋದವಳು ಕತ್ತಲಾಗುವವರೆಗೂ ಜಗಲಿಯಲ್ಲಿ ಕುಳಿತೆ. ಬಾಯಾರಿಕೆಗೆ ನೀರು ಕೂಡ ಸಿಗಲಿಲ್ಲ. ಅವರು ಮನೆಯ ಬಾಗಿಲು ತೆರೆಯಲೇ ಇಲ್ಲ. ನಾನು ಹೊರಟು ಬಂದೆ. ಅಲ್ಲಿಗೆ ತಾಯಿ ತಂದೆ ಸಂಬಂಧ ಕಡಿದುಹೋಯಿತು' ಎಂದು ನುಡಿದು ಪುನಃ ಬಿಕ್ಕಿ ಅಳತೊಡಗಿದಳು ಸನ್ಮತಿ. ಅವಳ ಅಳುವನ್ನು ಸಮಾಧಾನಪಡಿಸಿ ನಿಲ್ಲಿಸಲು ಸಾಧ್ಯವಿಲ್ಲ, ಅದು ತಾನಾಗಿಯೇ ನಿಲ್ಲಬೇಕು ಎಂದು ಶಾಲ್ಮಲಿ ಮೌನವಾಗಿದ್ದುಬಿಟ್ಟಳು. ಅವಳ ಕಣ್ಣಲ್ಲಿಯೂ ನೀರು. ದುಃಖದ ಕಡಲಿಗೆ ಬಿದ್ದಂತೆನಿಸಿದ ಶಾಲ್ಮಲಿಯ ಮನಸ್ಸಿಗಾದ ವೇದನೆಯಿಂದ ಹೊರಬರಲು ಬಹಳ ಹೊತ್ತು ಹಿಡಿಯಿತು. ಸನ್ಮತಿಯ ದುಃಖದ ಕತೆ ಆರಂಭವಾಗಿ ಕೊನೆಗೊಳ್ಳುವವರೆಗೂ ನರಹರಿ ಯಾವುದೇ ಭಾವವಿಕಾರವಿಲ್ಲದೆ ನಿರ್ಲಿಪ್ತನಾಗಿ ಕುಳಿತಿದ್ದ. ಶಾಲ್ಮಲಿ ಒಳಗೆ ಹೋಗಿ ಮಲಗಿಕೊಂಡಳು.

**(ಸಶೇಷ)**